# ಎನ್‌ಐಟಿಕೆ: ಉದ್ಯಮಿಗಳ ಸಮಾವೇಶ, ತಾಂತ್ರಿಕ ನೆರವಿನ ಒತ್ತು



**ಸುರತ್ಕಲ್, ಡಿ. 2:** ಕರಾವಳಿ ಕರ್ನಾಟಕ ಪ್ರದೇಶದಲ್ಲಿ ಸಂಶೋಧನೆ, ನಾವೀನ್ಯತೆ ಮತ್ತು ಉದ್ಯಮಶೀಲತಾ ಪರಿಸರವ್ಯವಸ್ಥೆಯನ್ನು ಹೆಚ್ಚಿಸಲು ಬೇಕಾದ ತಂತ್ರಜ್ಞಾನ ಪೂರಕ ವ್ಯವಸ್ಥೆಯನ್ನು ನೀಡಲು ಎನ್ ಐಟಿಕೆ ಎಂಜಿನಿಯರಿಂಗ್ ಕಾಲೇಜು ಬದ್ಧವಾಗಿದೆ ಎಂದು ನಿರ್ದೇಶಕ ಪ್ರೊ। ಬಿ. ರವಿ ಹೇಳಿದರು.

ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ನೆಲೆಗೊಂಡಿರುವ ವಿವಿಧ ಉದ್ಯಮ ಕಂಪೆನಿಗಳ ಸಿಇಒಗಳು ಮತ್ತು ಪ್ರತಿನಿಧಿಗಳ ಚರ್ಚಾ ಕೂಟದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಒಪ್ಪಂದ ಸಂಶೋಧನೆ, ಉತ್ಪನ್ನ ನಾವೀನ್ಯತೆ, ಪೈಲಟ್ ಉತ್ಪಾದನೆ, ಪರೀಕ್ಷೆ ಮತ್ತು ಗುಣಲಕ್ಷಣ, ತಂತ್ರಜ್ಞಾನ ಪೂರೈಕೆ, ಪಾಲುದಾರ ಸಂಪರ್ಕ, ಸ್ಟಾರ್ಟ್ ಅಪ್ ಇನ್‌ಕ್ಯುಬೇಶನ್, ವ್ಯವಹಾರ ವೇಗವರ್ಧನೆ, ಡಿಜಿಟಲ್ ರೂಪಾಂತರ, ನಿರಂತರ ಶಿಕ್ಷಣ, ಕೌಶಲ ಪ್ರಮಾಣೀಕರಣ ಮತ್ತು ಪ್ರತಿಭಾ ಸ್ವಾಧೀನದಂತಹ ಮೌಲ್ಯವರ್ಧಿತ ತಾಂತ್ರಿಕ ಸೇವೆಗಳನ್ನು ಎನ್‌ಐಟಿಕೆ ಉದ್ಯಮದ ಅಭಿವೃದ್ಧಿಗಾಗಿ ನೀಡಲು ಸಹಕಾರ ನೀಡುತ್ತದೆ ಎಂದರು.

ಕೆಐಒಸಿಎಲ್, ಎಂಆರ್‌ಪಿಎಲ್, ಪ್ಯಾರಾದೀಪ್ ಫಾಸ್ಫೇಟ್ ಲಿಮಿಟೆಡ್, ಗೋಡಂಬಿ ಸಂಸ್ಕರಣಾ ಘಟಕಗಳು, ಫಿಶ್‌ಮೀಲ್ ಸಂಸ್ಕರಣಾ ಘಟಕಗಳು, ಜಿಲ್ಲಾ ಕೈಗಾರಿಕಾ ಕೇಂದ್ರ-ಮಂಗಳೂರು, ಸಿಐಐ -ಮಂಗಳೂರು, ನಬಾರ್ಡ್, ಕೆಸಿಸಿಐ ಸೇರಿದಂತೆ ಪ್ರಮುಖ ಉದ್ಯಮಗಳು ಬ್ಯಾಂಕ್ ಅಧಿಕಾರಿಗಳು ಭಾಗವಹಿಸಿದ್ದರು.

ಎನ್‌ಐಟಿಕೆ ಪ್ರೊ। ಸುಬ್ರಾಯ್ ಹೆಗ್ಡೆ ನೇತೃತ್ವದ ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಮಿಗಳ ಪಾರ್ಕ್ ಮತ್ತು ಡಾ। ಕೆ. ಸುಪ್ರಭಾ ನೇತೃತ್ವದ ಇನ್‌ಸ್ಟಿಟ್ಯೂಟ್ ಇನ್ನೋವೇಶನ್ ಕೌನ್ಸಿಲ್ ಈ ಸಮಾವೇಶವನ್ನು ಆಯೋಜಿಸಿತ್ತು.

ಡೀನ್ ಪ್ರೊ। ಉದಯ ಭಟ್, ಪ್ರೊ। ಪ್ರಸನ್ನ ಬೇಲೂರು, ಎನ್ ಐ ಟಿ ಕೆ ಸುರತ್ಕಲ್ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ನಿರಂಜನ ಮಹಾಬಲಪ್ಪ ಮತ್ತಿತರರು ಉಪಸ್ಥಿತರಿದ್ದು ತಮ್ಮ ಅಭಿಪ್ರಾಯ ಹಾಗೂ ಮಾಹಿತಿಯನ್ನು ಹಂಚಿಕೊಂಡರು.